ತಳಿಗಳ ಗುಣ ಲಕ್ಷಣಗಳನ್ನು ಸಂರಕ್ಷಿಸುವ ಜೊತೆಗೆ ಹಾಲು ಉತ್ಪಾದನಾ ಸಾಮಥ್ಯವನ್ನು ಹೆಚ್ಚಿಸಲು ಹಾಗೂ ಹೊರೆ ಎಳೆಯುವ ಶಕ್ತಿಯನ್ನು ಹೆಚ್ಚಿಸಲು ಆಯ್ದ ತಳಿಗಳ ಸಂವರ್ಧನೆಯನ್ನು ಸದರಿ ತಳಿಗಳ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದೆ.

ಶುದ್ಧ ತಳಿಗಳ ಮಿಶ್ರ ತಳಿ ಹಾಗೂ ದೇಶಿಯ ತಳಿಗಳ ಘನೀಕೃತ ವೀರ್ಯವನ್ನು ಗ್ರಾಮಾಂತರ ಪ್ರದೇಶದಲ್ಲಿನ ರೈತರು ದೇಶಿಯ ತಳಿ ಅಭಿವೃದ್ದಿಗಾಗಿ ರಾಜ್ಯಾದ್ಯಂತ ಇರುವ 3774 ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಕೃತಕ ಗರ್ಭದಾರಣ ಸೌಲಭ್ಯವನ್ನು ಸಹ ಒದಗಿಸಲಾಗಿದೆ.

ಕರ್ನಾಟಕ ಜಾನುವಾರು ಅಭಿವೃದ್ದಿ ಸಂಸ್ಥೆಯ ಸ್ಥಾಪನೆ.

ಗ್ರಾಮಾಂತರ ಪ್ರದೇಶದ ರೈತರಿಗೆ ಮಿಶ್ರ ತಳಿ ಹಾಗೂ ದೇಶಿಯ ತಳಿಗೋವುಗಳಲ್ಲಿನ ಗುಣ ಲಕ್ಷಣಗಳ ಬಗ್ಗೆ ಅಗ್ಗಿಂದಾಗ್ಗೆ ತರಬೇತಿ ಮೂಲಕ ತಳಿಗಳ ಸಂರಕ್ಷಣೆ ಹಾಗೂ ಅಭಿವೃದ್ದಿ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಈ) ರಾಜ್ಯದಲ್ಲಿ ಒಟ್ಟು 11 ಸರ್ಕಾರಿ ಗೋತಳಿ ಕೇಂಬ್ರಗಳು ಕಾರ್ಯನಿರ್ವಹಿಸುತ್ತಿವೆ. ಖಾಸಗಿ ಗೋತಳಿ ಸಂವರ್ಧನಾ ಕ್ಷೇತ್ರಗಳು ಮಾಹಿತಿ ಲಭ್ಯವಿಲ್ಲ.

435(737) ಶ್ರೀ.ಜಿ. ಕೃಷ್ಣ ಪಾಲೇಮಾರ್ ವಿಧಾನ ಸಭಾ ಸದಸ್ಯರು (ಸುರತ್ಕಲ್) ಮಾನ್ಯ ಬೃಹತ್, ಮಧ್ಯಮ,ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರಿನಲ್ಲಿ ವಿಶೇಷ ಆರ್ಥಿಕ ವಲಯ ಯೋಜನೆಯನ್ನು ರೂಪಿಸಲಾಗಿದೆಯೇ?

ಆ) ರೂಪಿಸಿದ್ದಲ್ಲಿ ಅದರ ವಿವರಗಳೆನು?

ಇ) ಇಲ್ಲವಾದಲ್ಲಿ ಸರ್ಕಾರದ ಭರವಸೆಯಂತೆ ಯೋಜನೆಯನ್ನು ರೂಪಿಸಿ ಯಾವಾಗ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಪಿ.ಜಿ. ಆರ್. ಸಿಂಧ್ಯ (ಬೃಹತ್, ಮಧ್ಯಮ,ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಮೆ.ಕೆನರಾ ಛೇಂಬರ್ ಆಫ್ ಕಾಮರ್ಸ ಮತ್ತು ಇಂಡಸ್ಟ್ರೀ, ಮಂಗಳೂರಿನಲ್ಲಿ ಒಂದು ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪಿಸುವ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಈ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ ಮೇರೆಗೆ ಯೋಜನೆಗೆ ಕೇಂದ್ರ ಸರ್ಕಾರದ ತಾತ್ವಿಕ ಅನುಮೋದನೆಯನ್ನು ದಿನಾಂಕ 8.8.2003ರಂದು 1 ವರ್ಷದ ಅವಧಿಗೆ ನೀಡಲಾಯಿತು. ತದನಂತರ ಅನುಮತಿಯನ್ನು ದಿನಾಂಕ 8.2.2005ರವರೆಗೆ ವಿಸ್ತರಿಸಲಾಗಿದೆ.

ಆ) ಅನುಮೋದಿತ ಯೋಜನೆಯನ್ವಯ ಮಂಗಳೂರಿನಲ್ಲಿ 1,350 ಏಕರೆ ಪ್ರದೇಶದಲ್ಲಿ ರೂ.710 ಕೋಟಿ ವೆಚ್ಚದಲ್ಲಿ ಕರಾವಳಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಲು ಉದ್ದೇಶಿಸಲಾಯಿತು. ಈ ಯೋಜನೆಯನ್ನು ಅರ್ಹ ಖಾಸಗಿ ಬಂಡವಾಳ ಹೂಡಿಕೆದಾರರ ಸಹಭಾಗಿತ್ವದೂಂದಿಗೆ ಕಾರ್ಯಗತಗೂಳಿಸಲು ಉದ್ದೇಶಿಸಲಾಯಿತು.

ತದನಂತರ ಮೆ.ಆಯಿಲ್ ಮತ್ತು ನ್ಯಾಚುರಲ್ ಗ್ಯಾಸ್ ಕಾರ್ಪೂರೇಷನ್ ಲಿ.,[ONGC] ರವರು ಮಂಗಳೂರಿನಲ್ಲಿ ನೈಸರ್ಗಿಕ ಅನಿಲ ಆಮದು ಸ್ಥಾವರ, ಅನಿಲ ಸಾಗಾಣಿಕೆ ಪೈಪ್‌ಲೈನ್

ಮತ್ತು ಪೆಟ್ರೋಲಿಯಂ ಉತ್ಪನ್ನಗಳ ವಿತಾರಣಾ ವ್ಯವಸ್ಥೆ ಮುಂತಾದ ಕ್ಷೇತ್ರದಲ್ಲಿ ಬೃಹತ್ ಬಂಡವಾಳ ಹೂಡಿಕೆಯನ್ನು ಮಂಗಳೂರು ನೆಲೆಸಲು ಪ್ರಸ್ತಾಪಿಸಿದ್ದು, ಈ ಘಟಕಗಳನ್ನು ಉದ್ದೇಶಿತ ಕರಾವಳಿ ಕರಾವಳಿ ವಿಶೇಷ ಆರ್ಥಕ ವಲಯದಲ್ಲಿ ಸ್ಥಾಪಿಸಲು ತೀರ್ಮಾನಿಸಿತು ಮತ್ತು ಕರಾವಳಿ ಆರ್ಥಿಕ ವಲಯ ನಿರ್ಮಾಣದಲ್ಲಿ ಆರ್ಥಿಕ ಪಾಲುದಾರಿಕೆಯನ್ನು ಪಡೆಯಲು ಇಚ್ಛೆ ವ್ಯಕ್ತ ಪಡಿಸಿತು. ಅದರನ್ವಯ ಮೆ.ಕೆನರಾ ಛೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರೀ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಮೆ.ಆಯಿಲ್ ಮತ್ತು ನ್ಯಾಚುರಲ್ ಗ್ಯಾಸ್ ಕಾರ್ಪೊರೆಷನ್ ಲಿ.ರವರ ನಡುವೆ ಒಂದು ಒಡಮಬಡಿಕೆಗೆ ದಿನಾಂಕ 30.8.2004ರಂದು ಸಹಿ ಮಾಡಲಾಗಿದೆ. ಈ ನಿಟ್ಟಿನಲ್ಲಿ ಪೂರ್ವಭಾವಿ ಕ್ರಮಗಳನ್ನು ಜರುಗಿಸಲಾಗಿದೆ.

ಇ) ಉದ್ಭವಿದುವಿದಿಲ್ಲ.

436(643) ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಈ ಕೆಳಕಂಡ ಪ್ರಶ್ನೇಗಳಿಗೆ ಉತ್ತರಿಸುವರೆ.

ಅ) ತುರುವೇಕೆರೆ ತಾಲ್ಲೂಕಿನಾದ್ಯಾಂತ ಇರುವ ಅಲ್ಪಸಂಖ್ಯಾತರ ಪ್ರಾರ್ಥನಾ ಮಂದಿರಗಳಷ್ಟು(ಪೂರ್ಣ ವಿಳಾಸನಳನ್ನು ನೀಡುವುದು):

ಆ) ಈ ಮಂದಿರಗಳ ನಿರ್ವಾಹರಣೆಗಾಗಿ ವಕ್ಫ್ ಮಂಡಳಿ ನೀಡಿರುವ ಹಣ ಎಷ್ಟು:(ಮಂದಿರವಾರು ವಿವರಗಳನ್ನು ನೀಡುವುದು)?

ಶ್ರೀ ಮೆರಾಜುದ್ದೀನ್ ಎನ್. ಪಾಟೀಲ್,(ಪಶುಸಂಗೋಪನೆ ಮತ್ತು ವಕ್ಫ ಸಚಿವರು):

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಮುಸ್ಲಿಂ ಜನಾಂಗಕ್ಕೆ ಸೇರಿದ 37 ಆಸ್ತಿಗಳು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಾಯಿಸಲಾಗಿದೆ. ಪಟ್ಟಿ ಲಗತ್ತಿಸಿದೆ.

ಆ) 2004–05ನೇ ಸಾಲಿನಲ್ಲಿ ತುರುವೇಕೆರೆ ತಾಲ್ಲೂಕಿನ ವಕ್ಫ್ ಆಸ್ತಿಗಳ ನಿರ್ವಹಣೆಗಾಗಿ ರೂ. 5,20,000–00ಗಳನ್ನು ಬಿಡುಗಡೆ ಮಾಡಿದ್ದು, ಅದರ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಸಂಸ್ಥೆಯಹೆಸರು	ಮಂಜೂರಾದ ಮೊತ್ತ
1.	ಜಾಮಿಯಾ ಮಸಜಿದ್,ಬನಸಂದ್ರ	1,50,000–00
2.	ಈದಗಾ ಸುನ್ನಿ ಬನಸಂದ್ರ	50,000–00
3.	ಜಾಮಿಯಾ ಮಸಜಿದ್,ಮಾಯಸಂದ್ರ	40,000–00
4.	ಜುಮ್ಮಾ ಮಸಜಿದ್,ಮಾಯಸಂದ್ರ	25,000–00
5.	ಜುಮ್ಮಾ ಮಸಜಿದ್, ದಾನೇಹಳ್ಳಿ	20,000–00
6.	ಅಶುರೆಖಾನಾ ಸುನ್ನಿ ತುರುವೇಕೆರೆ	20,000–00
7.	ಜುಮ್ಮಾ ಮಸಜಿದ್, ದೇವನಾಯಕನಹಳ್ಳಿ	25,00 –00
8.	ಜುಮ್ಮಾ ಮಸಜಿದ್, ಚದದೂರ್	20,000--00